# ಸೆಲಿನಾ ಸ್ಪೆಷಲ್



ಸೆಲಿನಾ ಜೇಟ್ಲಿಯನ್ನು ನಟಿಯಾಗಿ ಬಾಲಿವುಡ್ ಮರೆತೇಬಿಟ್ಟಿರುವ ಹೊತ್ತಲ್ಲಿ, ಮತ್ತೆ ಸೆಲಿನಾ ಸುದ್ದಿಯಲ್ಲಿದ್ದಾಳೆ. ಮದುವೆಯಾಗಿ ಮೂರು ಮಕ್ಕಳ ತಾಯಿಯೂ ಆಗಿರುವ ಸೆಲಿನಾ ಇದೀಗ 'ಸೀಸನ್ಸ್ ಗ್ರೀಟಿಂಗ್ಸ್' ಎನ್ನುವ ಹೊಸ ಸಿನಿಮಾದಲ್ಲಿ ನಟಿಸುತ್ತಿದ್ದಾಳೆ. ಅಷ್ಟೇ ಆಗಿದ್ದರೆ ಅದು ದೊಡ್ಡ ಸುದ್ದಿಯಲ್ಲ. ಈ ಸಿನಿಮಾದಲ್ಲಿ ಇದೇ ಮೊದಲ ಬಾರಿಗೆ 'ಇಂಟಿಮೆಸಿ ಸೂಪರ್‌ವೈಸರ್' ಒಬ್ಬರನ್ನು ನೇಮಿಸಲಾಗಿದೆಯಂತೆ. ಹೊಸ ಹೀರೊ ಅಜರ್ ಖಾನ್ ಮತ್ತು ಹೀರೊಯಿನ್ ದೈಹಿಕವಾಗಿ ಅತ್ಯಂತ ಆಪ್ತ ದೃಶ್ಯಗಳಲ್ಲಿ ಪಾಲ್ಗೊಳ್ಳುವಾಗ ಮುಖ್ಯವಾಗಿ ಹೀರೊಯಿನ್‌ಗೆ ಮುಜುಗರ ಅಥವಾ ಕಿರುಕುಳ ಆಗದಂತೆ ನೋಡಿಕೊಳ್ಳುವುದು ಈ ಸೂಪರ್‌ವೈಸರ್ ಕೆಲಸ! 'ಮಿಟೂ' ಪ್ರಕರಣಗಳು ವರದಿಯಾಗಿ ಹಲವು ಹೀರೊಗಳ ವಿರುದ್ಧ ಮೊಕದ್ದಮೆ ದಾಖಲಾದ ಬಳಿಕ ಬಾಲಿವುಡ್‌ನಲ್ಲಿ ಇದೊಂದು ಹೊಸ ಬೆಳವಣಿಗೆ.

'ಸೀಸನ್ಸ್ ಗ್ರೀಟಿಂಗ್ಸ್'ನಲ್ಲಿ ನಾಯಕ– ನಾಯಕಿಯದ್ದು ಲಿವ್‌ಇನ್ ರಿಲೇಷನ್‌ನ ಪಾತ್ರಗಳು. ಹಾಗಾಗಿ ದೈಹಿಕವಾಗಿ ಅತ್ಯಂತ ಆಪ್ತ ಕ್ಷಣಗಳನ್ನು ಕಳೆಯುವ ದೃಶ್ಯವಿದೆಯಂತೆ. ಈ ಬಗ್ಗೆ ವಿವರಿಸಿದಾಗ ಸೆಲಿನಾ ಸ್ವತಃ ಈ ರೀತಿಯ ಸೂಪರ್‌ವೈಸರ್ ಒಬ್ಬರನ್ನು ನೇಮಿಸಲು ಸೂಚಿಸಿದಳಂತೆ. ನಿರ್ದೇಶಕ ರಾಮ್‌ಕಮಲ್ ಮುಖರ್ಜಿ ಅದಕ್ಕೆ ಒಪ್ಪಿದ್ದು, ಅದರಂತೆ ಹಿರಿಯ ಮಹಿಳೆಯೊಬ್ಬರು 'ಇಂಟಿಮೆಸಿ ಸೂಪರ್‌ವೈಸರ್' ಆಗಿದ್ದಾರೆ. ಆ ಇಡೀ ದೃಶ್ಯ ಶೂಟ್ ಮಾಡುವಾಗ ಸ್ವತಃ ನಿರ್ದೇಶಕರೂ ಅಲ್ಲಿರಲಿಲ್ಲವಂತೆ. ಕ್ಯಾಮೆರಾಮನ್ ಒಬ್ಬರನ್ನು ಬಿಟ್ಟು ಉಳಿದೆಲ್ಲರೂ ಮಹಿಳಾ ಸಿಬ್ಬಂದಿಯೇ ಇದ್ದರಂತೆ. ನಿರ್ದೇಶಕರು ದೃಶ್ಯವನ್ನು ವಿವರಿಸಿದ ಬಳಿಕ ಮಾನಿಟರ್ ಬಳಿಗೆ ಹೋಗಿ ಅದರಲ್ಲೇ ನೋಡಿ ಮೈಕ್‌ನಲ್ಲಿ ಸೂಚನೆಗಳನ್ನು ಕೊಟ್ಟರಂತೆ.

ಬಾಲಿವುಡ್ ಸಿನಿಮಾದಲ್ಲಿ ಸೆಲಿನಾ ನಟಿಸಿ ಏಳೆಂಟು ವರ್ಷಗಳೇ ಆಗಿವೆ. 2011ರಲ್ಲಿ ನಟಿಸಿದ 'ಥ್ಯಾಂಕ್‌ಯೂ' ಬಾಕ್ಸಾಫೀಸ್‌ನಲ್ಲಿ ಬರಖತ್ತಾಗಲಿಲ್ಲ. ಅದೇ ವರ್ಷ ಕನ್ನಡದ 'ಶ್ರೀಮತಿ' ಎನ್ನುವ ಚಿತ್ರದಲ್ಲಿ ನಟಿಸಿದ್ದೂ ಸುದ್ದಿಯಾಗಿತ್ತು. ಈ ಹೊಸ ಚಿತ್ರ, ಹೊಸ ರೀತಿಯ ಸುದ್ದಿಯಿಂದಾಗಿ ಯಶಸ್ಸು ಪಡೆಯುತ್ತದೋ ನೋಡಬೇಕು. ■

# ಅಕ್ಷಯಪಾತ್ರೆ!

ಅಕ್ಷಯ್ ಕುಮಾರ್ ಈ ವರ್ಷವೂ ಬಿಡುವಿಲ್ಲದ ನಟ. ವರ್ಷಕ್ಕೆ ಐದಾರು ಸಿನಿಮಾಗಳಲ್ಲಿ ನಟಿಸುತ್ತಿರುವ ಅಕ್ಷಯ್ ಕಳೆದ ವರ್ಷದ ಬ್ಯುಸಿ ಶೆಡ್ಯೂಲನ್ನು ಈ ವರ್ಷವೂ ಮುಂದುವರಿಸಿದ್ದಾನೆ. ಇದೇ ಮೊದಲ ಬಾರಿಗೆ ಯುದ್ಧದ ಚಿತ್ರ 'ಕೇಸರಿ'ಯಲ್ಲಿ ನಟಿಸಿರುವ ಅಕ್ಷಯ್, ಅದರ ಬಗ್ಗೆ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಇದರ ಮಧ್ಯೆ ವೆಬ್ ಸಿರೀಸ್‌ನಲ್ಲಿ ನಟಿಸಲೂ ಸಹಿ ಹಾಕಿದ್ದಾರೆ. 'ವೆಬ್ ಸಿರೀಸ್‌ನಲ್ಲಿ ಈಗ ಕುತೂಹಲಕರ ಸಿನಿಮಾಗಳು ಬರುತ್ತಿವೆ. ನನ್ನ ಮಗ ಆರವ್ ಪ್ರಭಾವದಿಂದಾಗಿ ವೆಬ್ ಸಿರೀಸ್‌ಗೂ ಸಹಿ ಹಾಕಿದ್ದೇನೆ. ವೆಬ್ ಸಿರೀಸ್ ಯಶಸ್ಸಿನಿಂದಾಗಿ ಥಿಯೇಟರ್‌ಗೆ ಬಂದು ಸಿನಿಮಾ ನೋಡುವವರ ಸಂಖ್ಯೆಯೇನೂ ಕಡಿಮೆ ಆಗುತ್ತೆ ಅಂದುಕೊಂಡಿಲ್ಲ' ಎಂದಿದ್ದಾನೆ ಅಕ್ಷಯ್.

'ಮಿಶನ್ ಮಂಗಲ್', 'ಗುಡ್‌ನ್ಯೂಸ್', 'ಸೂರ್ಯವಂಶಿ' ಮುಂತಾಗಿ ಅಕ್ಷಯ್ ಅಭಿನಯದ ಹೊಸ ಚಿತ್ರಗಳು ಸಾಲುಗಟ್ಟಿ ಬರಲಿವೆ. ಈ ಮಧ್ಯೆ ತಾಪ್ಸೀ ಪನ್ನೂ ಪ್ರಮುಖ ಪಾತ್ರದಲ್ಲಿರುವ 'ನಾಮ್ ಶಬನಾ' ಚಿತ್ರದಲ್ಲಿ ಅಷ್ಟೇನೂ ಮುಖ್ಯವಲ್ಲದ ಪಾತ್ರವೊಂದರಲ್ಲಿ ಅಕ್ಷಯ್ ನಟಿಸಿರುವುದು ವಿಶೇಷ. ಗುಡ್‌ನ್ಯೂಸ್‌ನಲ್ಲಿ ಕರೀನಾ ಹೀರೋಯಿನ್ ಆಗಿರುವುದು ಇನ್ನೊಂದು ವಿಶೇಷ. ಆ್ಯಕ್ಷನ್, ರೊಮ್ಯಾನ್ಸ್, ಕಾಮಿಡಿ ಮಾತ್ರವಲ್ಲ ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವಂತಹ ಸಿನಿಮಾಗಳಲ್ಲೂ ಎಗ್ಗಿಲ್ಲದೆ ನಟಿಸುತ್ತಿರುವ ಅಕ್ಷಯ್, 50 ದಾಟಿದರೂ ಈಗಲೂ ಆಕರ್ಷಕ ಮೈಕಟ್ಟು ಮತ್ತು ಮುಗುಳ್ನಗೆಯನ್ನು ಉಳಿಸಿಕೊಂಡು ಯಶಸ್ವೀ ಚಿತ್ರಗಳನ್ನು ನೀಡುತ್ತಿರುವುದು ಕುತೂಹಲಕರ ಸಂಗತಿ.

■ ಬಿಂದು

